IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಮಲ್ಲಿಕಾ ಘಂಟಿಯವರ ಕವನಗಳಲ್ಲಿ ಸ್ತ್ರೀವಾದದ ವಿಚಾರಗಳು

**ಡಾ.ಶ್ರೀನಿವಾಸ ಎಚ್. ದೊಡ್ಡಮನಿ, ಸಹಾಯಕ ಪ್ರಾಧ್ಯಾಪಕರು ಕನ್ನಡ ವಿಭಾಗ**
**ಬಿ.ಎಲ್.ಡಿ.ಇ.ಎ. ಸಂಸ್ಥೆಯ ಎಸ್.ಬಿ. ಕಲಾ ಮತ್ತು ಕೆ.ಸಿ.ಪಿ. ವಿಜ್ಞಾನ ಮಹಾವಿದ್ಯಾಲಯ, ವಿಜಯಪುರ**

"ಕಾವ್ಯ ನನ್ನೊಳಗಿನ ಲೋಕದ ತಹತಹಗಳಿಗೆ ರಹದಾರಿಯೆಂದು ಬಗೆದವಳು ನಾನು. ಹೆಣ್ಣಾಗಿ ಹುಟ್ಟುವುದೆ ಪಾಪವೆಂದು ಬಗೆದ ಈ ಪುಣ್ಯ ಭೂಮಿಯಲ್ಲಿ ನಾನು ನನ್ನಂಥವರು ಅನುಭವಿಸಿದ್ದು ಅನುಭವಿಸಬೇಕಾಗಿರುವ ಶ್ರೀಮಂತ ಲೋಕದ ದರಿದ್ರ ವಾಸ್ತವಕ್ಕೆ ಕನ್ನಡಿ ಹಿಡಿಯಬೇಕೆನಿಸಿದಾಗಲೆಲ್ಲ ಕಾವ್ಯ ನನ್ನೊಳಗೆ ಹುಟ್ಟಿ ನಮ್ಮೊಂದಿಗೆ ವ್ಯವಹರಿಸಲು ಮುಂದಾದಾಗಲೆಲ್ಲ ನಾನು ಜೀವಂತಗೊಂಡಿರುವೆ."[1] ಎನ್ನುವ ಕವಯತ್ರಿ ಮಲ್ಲಿಕಾ ಘಂಟಿಯವರು ತಮ್ಮ ಕಾವ್ಯಗಳ ಮೂಲಕವೇ ತಾರತಮ್ಯವಾದಿಗಳಿಗೆ ಉತ್ತರ ನೀಡುತ್ತಾರೆ. ಇವರು ಬರೆದ ನಾಲ್ಕು ಕವನ ಸಂಕಲನಗಳು ಹಾಗೂ ಕವನ ಸಂಕಲನಗಳ ಶೀರ್ಷಿಕೆಗಳು ಸ್ತ್ರೀವಾದ ನೆಲೆಯಿಂದಲೇ ರಚಿತಗೊಂಡಿವೆ. 'ಈ ಹೆಣ್ಣುಗಳೆ ಹೀಗೆ', 'ರೊಟ್ಟಿ ಮತ್ತು ಹುಡುಗಿ', 'ಬೆಲ್ಲದಚ್ಚು ಮತ್ತು ಇರುವೆದಂಡು', 'ತುಳಿಯದಿರಿ ನನ್ನ' ಈ ಹೆಸರುಗಳಲ್ಲಿಯೇ ಸ್ತ್ರೀವಾದದ ನೆಲೆಗಳು ಅಡಗಿರುವುದನ್ನು ನಾವು ಕಾಣುತ್ತೇವೆ. ಈ ಕವನ ಸಂಕಲನಗಳಲ್ಲಿ ಗರಿಷ್ಠ ಪ್ರಮಾಣದ ಕವನಗಳು 'ಸ್ತ್ರೀ ವಾದದ' ನೆಲೆಯನ್ನು ಹೊಂದಿವೆ.

ಮಲ್ಲಿಕಾ ಘಂಟಿಯವರು ತಮ್ಮ ಮೊದಲ ಕವನ ಸಂಕಲನವಾದ 'ತುಳಿಯದಿರಿ ನನ್ನ' ಎಂಬ ಕೃತಿಯಲ್ಲಿ ಬರುವ 'ಪ್ರೀತಿ ಅಂದರೇನು? ಎಂಬ ಕವನದಲ್ಲಿ ಸಮೂಹವು ಸ್ತ್ರೀಯನ್ನು ಕೆಟ್ಟ ಸಂಪ್ರದಾಯದಲ್ಲಿ ಹೇಗೆ ಬಲಿಪಶು ಮಾಡುತ್ತದೆ ಎಂಬುದನ್ನು ಬಹು ಮಾರ್ಮಿಕವಾಗಿ ಹೇಳುತ್ತಾರೆ.

.......ಅವಳಿಗೂ ಗಂಡಂದಿರು ಅದಾರ ಸಾವಿರ ಜನಾ
ರಾತ್ರಿಮಾತ್ರ
ಹಣ, ದೇಹ, ದೇಹ, ಹಣ
ಹಾಗಾದ್ರೆ ಪ್ರೀತಿ ಅಂದ್ರೇನು?
ಈಗ್ಲಾದ್ರೂ ತಿಳೀತಾ ಅವಳು "ಸೂಳೆ" ಅಂತ
ಕ್ಷಮಿಸಿ ಸೂಳೆ ಅಲ್ಲ "ದೇವದಾಸಿ" ಅಂತ."[2]

ಈಗಲೂ ಸಹಿತ ದೇವದಾಸಿ ಪದ್ಧತಿಯು ಆಚರಣೆಯಲ್ಲಿ ಇರುವುದನ್ನು ನಾವು ಕಾಣುತ್ತೇವೆ. ಪ್ರಾಚೀನ ಕಾಲದಿಂದಲೂ ಸ್ತ್ರೀಯನ್ನು ದೇವರ ಹೆಸರಿನಲ್ಲಿ ಬಸವಿ ಬಿಡುವ ಪದ್ಧತಿ, ದೇವದಾಸಿಯಾಗಿ ಭಿಕ್ಷೆ ಬೇಡುವಂತೆ ಮಾಡುವ ಅನಿಷ್ಟ ಪದ್ಧತಿಗಳಿವೆ ಎಂಬುದನ್ನು ಮಾರ್ಮಿಕವಾಗಿಯೇ ತಿಳಿಸುತ್ತಾರೆ. ಈ ದೇವದಾಸಿಯರು ಪುರುಷನ ಹಿತಾಸಕ್ತಿಗನುಗುಣವಾಗಿ ಲೈಂಗಿಕವಾಗಿ ಬಳಕೆಗೊಳ್ಳುತ್ತಿದ್ದರು. ಈಗಲೂ ಸಹಿತ ಸವದತ್ತಿಯ ರೇಣುಕಾದೇವಿ ಅಥವಾ ಎಲ್ಲಮ್ಮನ ದೇವಸ್ಥಾನಗಳಲ್ಲಿ ಈ ಪದ್ಧತಿಯು ಬಳಕೆಯಲ್ಲಿರವುದನ್ನು ಕಾಣುತ್ತೇವೆ. 'ಜಡೆ ಒಡೆಯುವುದು' ದೇವರೆಂದೆ ಭಾವಿಸಲಾಗಿದೆ. ಗ್ರಾಮೀಣ ಸ್ತ್ರೀಯರು ತಲೆಯನ್ನು ದಿನಾಲು ಬಾಚಿಕೊಳ್ಳದೆ ಇರುವುದರಿಂದ ಕೂದಲು ಗಂಟುಗೊಂಡು ಜಡೆಯಾಕಾರ ಪಡೆಯುತ್ತವೆ. ಇದನ್ನೇ ಅನಕ್ಷರಸ್ಥ ಜನರು ಇಲ್ಲದ ಮೂಢನಂಬಿಕೆಗೆ ಬಲಿಯಾಗಿರುವುದನ್ನು ಈ ಕವನದ ಮೂಲಕ ಎತ್ತಿತೋರಿಸಲಾಗಿದೆ. ದುಡ್ಡಿನ ಆಸೆಗಾಗಿ ಈ ದೇವದಾಸಿ ಹೆಣ್ಣುಮಕ್ಕಳು ಸೂಳೆಗಾರಿಕೆಯನ್ನು ಮಾಡುತ್ತಿರುವುದನ್ನು ಕವಯತ್ರಿಯು ಬಯಲಿಗೆಳೆದಿದ್ದಾರೆ.

"ನಿನ್ನ ವಿದ್ವತ್ ಪ್ರಭಾವದಿಂದ
ತಾಳಿ ಉರುಳಾಗಿದೆ ಬಳೆ ಕೊಳವಾಗಿದೆ
ಗಂಡು ಹೆಣ್ಣಿನ ಸಂಬಂಧ ದೃಢೀಕರಿಸಿ
ಹೆಣ್ತನದ ಮೆರುಗು ನೀಡುವ ತಾಳಿ ಉರುಳಲ್ಲ
ಸಪ್ತಸ್ವರದ ಇಂಪನ್ನು ನೀಡುವ ಬಳೆ
ಬಂಧನವಲ್ಲ ಗೆಳತಿ
ನಾವು ಸ್ವಾತಂತ್ರ್ಯಗಳಿಸಿ ಗಂಡಸನ್ನು ತುಳಿಯುವುದಲ್ಲ
ತುಳಿಯುತ್ತಿರುವ ಗಂಡಸರನ್ನು ಎಚ್ಚರಿಸಿ
ಸುಸಂಸ್ಕೃತ ಸಮಾಜ ನಿರ್ಮಿಸುವ

ಭವ್ಯವಾದ, ಭಾರವಾದ ಹೊರೆ
ನಮ್ಮ ಮೇಲಿದೆ."[3]

ಎನ್ನುವಲ್ಲಿ ಕವಯತ್ರಿಯು ಸ್ತ್ರೀಯರು ಪುರುಷ ಹಾಕಿದ ಬಂಧನಗಳಿಂದ ಹೇಗೆ ಸ್ವತಂತ್ರವಾಗಬೇಕೆಂಬುದನ್ನು ಬಹು ಸೂಕ್ಷ್ಮವಾಗಿ ತಿಳಿಸುತ್ತಾರೆ. ಪುರಾತನ ಪರಂಪರೆಯಿಂದಲು ಪುರುಷ ಪ್ರಧಾನ ವ್ಯವಸ್ಥೆಯು ಸ್ತ್ರೀಯ ಸ್ವಾತಂತ್ರ್ಯವನ್ನು ಕಟ್ಟಿ ಹಾಕುತ್ತಾ ಬಂದಿರುವಂತದ್ದನ್ನು ನಾವು ಕಾಣುತ್ತೇವೆ. ಇದರಿಂದ ನಾವು ಬಿಡುಗಡೆಯನ್ನು ಪಡೆಯಬೇಕಾಗಿದೆ. ಬಿಡುಗಡೆ ಪಡೆದ ಮೇಲೆ ದ್ವೇಷ ಭಾವದಿಂದ ನಾವು ಗಂಡಸರ ಮೇಲೆ ಅತಿಕ್ರಮಣ ಮಾಡದೆ ಅವರನ್ನು ಸಮಾನತೆಯ ಹಾದಿಗೆ ಎಚ್ಚರಿಸುವ ಮೂಲಕ ಸುಸಂಸ್ಕೃತ ಸಮಾಜವನ್ನು ನಿರ್ಮಿಸುವ ಹೊಣೆಗಾರಿಕೆಯನ್ನು ಭಾರತೀಯ ಎಲ್ಲ ಸ್ತ್ರೀಯರಿಗೂ ಕೇಳುತ್ತಿರುವುದು ಗಮನಾರ್ಹವಾಗಿದೆ. ಮಲ್ಲಿಕಾ ಘಂಟಿ ಅವರ ಕವನಗಳ ವಿಶಿಷ್ಟತೆಯೆಂದರೆ ಕವನದ ಮೂಲಕ ನೇರವಾಗಿ ಪುರುಷನನ್ನು ದ್ವೇಷಿಸದೆ ಆತನಿಗೆ ತಿಳುವಳಿಕೆಯನ್ನು ನೀಡುವ ಮೂಲಕ ಸಮಾನತೆಯ ಸಮಾಜದ ನಿರ್ಮಿತಿಗೆ ಮುನ್ನುಗ್ಗುವ ಆಶಯವನ್ನು ಕವನಗಳಲ್ಲಿ ಕಾಣುತ್ತೇವೆ.

"ನಸ್ತ್ರೀ ಸ್ವಾತಂತ್ರ್ಯಮರ್ಹತಿ
ಎಂದ ಮನು ಮಹರ್ಷಿಯ
ಮಾತನ್ನು ಒಪ್ಪಲೇ?
ಇಲ್ಲವೆ
ಸ್ವಾತಂತ್ರ್ಯ, ಸಮಾನತೆ
ಎಂದು
ಸರಸಕ್ಕೆ ಕರೆಯುವ ಗೋಸುಂಬೆಗಳನ್ನು
ಮುತ್ತಿಕ್ಕಲೇ? .......
ಹಾರಬೇಕೆಂದಿರುವೆ ನೀಲಿ ಬಾಂದಳದಲ್ಲಿ
ಸ್ವಚ್ಛಂದವಾಗಿ ಬೀಸುವ ಗಾಳಿ
ತಿಳಿಯಾಗಿ ತೇಲುವ ಮೋಡಗಳ
ಜೊತೆಗೂಡಿ ನಾನೇ ನಾನಾಗಿ
ಹಾರಬೇಕೆಂದಿರುವೆ."[4]

'ಮನು' ತನ್ನ 'ಮನುಸ್ಮೃತಿ' ಎಂಬ ಕೃತಿಯಲ್ಲಿ ಸ್ತ್ರೀಯರನ್ನು ಒಂದು ಕಡೆಗೆ ಎತ್ತರಿಸುತ್ತಾನೆ. ಇನ್ನೊಂದು ಕಡೆಗೆ ಸ್ತ್ರೀಗೆ ಸ್ವಾತಂತ್ರ್ಯವೆಂಬುದೇ ಇಲ್ಲ ಎಂದು ಹೇಳುತ್ತಾನೆ. ಹಿಂದೂ ವೇದೋಪನಿಷತ್ತುಗಳು, ಪುರಾಣಗಳು, ಮಹಾಕಾವ್ಯಗಳು ಸ್ತ್ರೀಗೆ ಸ್ವಾತಂತ್ರ್ಯವನ್ನು ನೀಡದ ಕಾರಣ ಕೆಲವೊಂದು ಪಟ್ಟಬದ್ರ ಹಿತಾಸಕ್ತಿಗಳು ಈ ಮನುವಿನ ಗುಣವನ್ನೇ ಪ್ರದರ್ಶಿಸುವುದನ್ನು ಕವಯತ್ರಿಯೂ ಟೀಕಿಸುತ್ತಾಳೆ. ಇಂದಿನ ಆಧುನಿಕ ಸಮಾಜದಲ್ಲಿ ಸ್ತ್ರೀಪರವಾಗಿದ್ದೇನೆ ಎಂದು ಬಣ್ಣ ಬದಲಿಸಿಕೊಂಡು ಬಂದ ಅಣ್ಣಗಳು ಸ್ವಾತಂತ್ರ್ಯ, ಸಮಾನತೆಯ ಹೆಸರಿನಲ್ಲಿ ಸ್ತ್ರೀಯನ್ನು ಲೈಂಗಿಕವಾಗಿ ಶೋಷಿಸುವವರ ವಿರುದ್ಧ ಕವಯತ್ರಿಯು ಸಿಡಿದೆದ್ದಿರುವುದನ್ನು ಕಾಣುತ್ತೇವೆ.

ಸಮಾಜದಲ್ಲಿ ಇವೆಲ್ಲ ಅವಸ್ಥೆಗಳು ಇದ್ದರೂ ಕೂಡಾ ನೀಲಿ ಆಕಾಶದಲ್ಲಿ ಸ್ವತಂತ್ರಳಾಗುವ ಕನಸನ್ನು ಕಾಣುತ್ತಾಳೆ. ಆಕಾಶ ಎಂದರೆ ಯಾವುದೇ ಅಡೆತಡೆಗಳಿಲ್ಲದ ನಿರಾಕಾರವಾಗಿರುವ, ಎಲ್ಲೆಯೇ ಇಲ್ಲದ್ದು ಎಂಬ ಭಾವದೊಡನೆ ಅಂತಹ ಆಕಾಶದಲ್ಲಿ ಸ್ವತಂತ್ರ ಳಾಗುವ, ಈ ಕೆಟ್ಟ ವ್ಯವಸ್ಥೆಗಳನ್ನು ಧಿಕ್ಕರಿಸಿ ನಿಲ್ಲುವ ಮನೋವೃತ್ತಿಯನ್ನು ತಾಳುತ್ತಾಳೆ. ಮೋಡಗಳ ಜೊತೆಗೂಡಿ ಎಂಬ ಹೇಳಿಕೆಯು ಭೂಮಿಯಲ್ಲಿರುವ ಈ ಅಸಮಾನತೆಯನ್ನು ಕೊಚ್ಚಿಕೊಂಡು ಹೋಗುವ ಮಳೆಯಾಗಿಯೇ ಬರುವೆನೆಂಬ ನಿಲುವನ್ನು ಕವಯತ್ರಿಯು ತಾಳಿರುವಂತದ್ದು.

"ನೋಡಿ ಅಯ್ಯಾ
ಲೋಕದ ಡೊಂಕ ನಾನೇಕೆ ತಿದ್ದಲಿ
ನನ್ನ ತನು, ಮನವೇ ಸಂತೃಪ್ತಿಗೊಂಡಿಲ್ಲ
ಕೂಡಲ ಸಂಗಮದಲ್ಲಿ
ಕುತ್ತಿಗೆಯವರೆಗೆ ಮಾತ್ರ ನೀರು ಬಂದಿದೆ
ಪೂರ್ತಿಯಾದ ಮೇಲೆ ತಮಗೆ
ನನ್ನ ಅಭಿಪ್ರಾಯ ತಿಳಿಸಿ ಓಲೆ ಬರೆಯುವೆ
ಬರಲೇ, ಶರಣು ಶರಣಾರ್ಥಿಗಳು."[5]

'ಬಸವಣ್ಣನ ಭೆಟ್ಟಿಯಾದಾಗ' ಎಂಬ ಕವನದಲ್ಲಿ 12ನೇ ಶತಮಾನದ ಬಸವಣ್ಣನವರ ನೆನಪನ್ನು ತರುವಂತದ್ದು. ಬಸವಣ್ಣನವರು ಮಧ್ಯಕಾಲೀನ ಕನ್ನಡ ಸಾಹಿತ್ಯ ಘಟ್ಟದಲ್ಲಿ ಸಮಾನತೆಗಾಗಿ ಹೋರಾಡಿದ ಶ್ರೇಷ್ಠ ಶರಣ ಜಾತಿ, ಸಮಾನತೆ, ಲಿಂಗ ಸಮಾನತೆಯನ್ನು ಅಂದಿನ ಕಾಲಘಟ್ಟದಲ್ಲಿ ತರುವ ಮೂಲಕ ವಚನ ಚಳುವಳಿಯ ಮೂಲಕ ಸಾಮಾಜಿಕ ಪ್ರಜ್ಞೆ ಮೂಡಿಸಿದವರು. ಇಂದಿನ ಬಸವಣ್ಣನ ಅನುಯಾಯಿಗಳು ಮಾನವರನ್ನು ಸಮಾನರೆಂದು ಕಾಣದೆ ಅವರ ವೈಭವೀಕರಣದಲ್ಲಿ ಸಾಗುತ್ತಿರುವುದನ್ನು ಹೇಳುತ್ತಾರೆ. ಅಂದಿನ ಬಸವಣ್ಣನ ಮೌಲ್ಯಗಳು ಇಂದು ಗಾಳಿಗೆ ತೂರಿ ಹೋಗುತ್ತಿರುವವರ ಮೇಲೆ ಸೂಕ್ಷ್ಮವಾಗಿ ಪ್ರತಿಭಟಿಸವುದನ್ನು ಇಲ್ಲಿ ಕಾಣುತ್ತೇವೆ.

"ವರದಕ್ಷಿಣೆ ಕೊಡದ
ಕನ್ಯಾಪಿತೃಗಳ ಕಣ್ಣೀರ ಒರೆಸುವ
ಕರುಣೆ ತೋರುವ
ಕಣ್ಣು ಕಾಣದ ಮುದಿಗಂಡಿಗೆ
ಕನ್ಯತ್ವ ಕಳೆದುಕೊಂಡು
ನನ್ನುದ್ದ ಬೆಳೆದ ಮಕ್ಕಳಿಗೆ
ತಾಯಿಯಾಗುವಂತೆ
ಪ್ರೇರೇಪಿಸದಿರಿ ತ್ಯಾಗಗಳೇ"[6]

'ಸುಳಿಯದಿರಿ ತ್ಯಾಗಗಳೆ ನನ್ನ ಬಳಿ' ಎನ್ನುವ ಕವನದಲ್ಲಿ ಕವಯತ್ರಿಯು ಸಮಾಜದಲ್ಲಿನ ಬಹುಮುಖ್ಯವಾಗಿ ಕಾಡುವ 'ವರದಕ್ಷಣೆ' ಎಂಬ ಪಿಡುಗು ಎಷ್ಟೋ ಹೆಣ್ಣುಮಕ್ಕಳ ಸಾವಿಗೆ ಕಾರಣವಾಗಿರುವಂತದ್ದು. ಇಂತಹ ಮಕ್ಕಳ ಸಾವನ್ನು ಕಂಡು ಎಷ್ಟೋ ಜನ ತಂದೆ–ತಾಯಿಗಳು ಆತ್ಮಹತ್ಯೆ ಮಾಡಿಕೊಂಡಿರುವುದನ್ನು ನಾವು ಕಾಣುತ್ತೇವೆ. ವರದಕ್ಷಿಣೆ ನಿಷೇಧ ಕಾಯ್ದೆಯು ಜಾರಿಗೆಯಲ್ಲಿ ಇದ್ದರು ಕೂಡ ವರದಕ್ಷಿಣೆ ಕೊಡುವವರ ಮತ್ತು ಪಡೆಯುವವರ ಸಂಖ್ಯೆ ಇನ್ನು ಇಮ್ಮಡಿಯಾಗಿರುವುದನ್ನು ನಾವು ಕಾಣುತ್ತೇವೆ. ಇಂತಹ ದುರವಸ್ಥೆಯಲ್ಲಿ ಹೆಣ್ಣಿಗೆ 'ತ್ಯಾಗ' ಎಂಬ ಅಸ್ತ್ರವು ಅವಳನ್ನು ಬಲಿತೆಗೆದುಕೊಳ್ಳುವಂತದ್ದು ಇಲ್ಲಿ ಹೆಣ್ಣಾಗಿ ಹುಟ್ಟಬಾರದು ಎಂಬ ನೋವಿನ ಅಳಲನ್ನು ಕಾಣುತ್ತೇವೆ. "ನನ್ನುದ್ದ ಬೆಳೆದ ಮಕ್ಕಳಿಗೆ ತಾಯಿಯಾಗುವಂತೆ ಪ್ರೇರೇಪಿಸದಿರಿ ತ್ಯಾಗಗಳೇ" ಎನ್ನುವ ನುಡಿಯು ಹೆಣ್ಣಿನ ಸಂತಾನವೇ ಬೇಡ ಎನ್ನುವ ಪ್ರತೀತಿ ಕಂಡುಬರುತ್ತದೆ. ಬಡತನದಲ್ಲಿ ಬೆಳೆದು ಬಂದ ತಂದೆ–ತಾಯಿಯು ಹೆಣ್ಣನ್ನು ಮದುವೆ ಮಾಡಿ ಕೊಡುವಾಗ ವರದಕ್ಷಣೆ ಎಂಬ ರಾಕ್ಷಸನ ಜೊತೆಗೆ ಹೋರಾಡುವಂತದ್ದು ಇದರಲ್ಲಿ ತಂದೆ–ತಾಯಿ ಸೋತರೆ ಅಲ್ಲಿ ಮಗಳೇ ಬಲಿಯಾಗುವಳೆಂಬ ಕೆಟ್ಟ ಪರಿಣಾಮವನ್ನು ಕವಯತ್ರಿಯು ಈ ಕವನದ ಮೂಲಕ ಪ್ರಸ್ತಾಪಿಸಿದ್ದಾಳೆ.

"ನಮಸ್ಕಾರ ಅಹಲ್ಯಮ್ಮನೋರೆ
ಮರೆತು ಬಿಟ್ಟಿರಾ...... ನಾನು
ನಿಮ್ಮ ನಾಟಕ ನೋಡಲು
ಅದೇ ಪು.ತಿ.ನ. ಅವರದ್ದು
ನೋಡಲು ಬಂದಿರಲಿಲ್ಲವೇ......
ನಿಮ್ಮನ್ನು ಕವಯತ್ರಿಯರು
ತಮ್ಮ ಕಾವ್ಯ ವಸ್ತುವನ್ನಾಗಿ
ಆಯ್ದುಕೊಳ್ಳುತ್ತಿರುವರಲ್ಲ!...
ಇವತ್ತು ಮೀಟಿಂಗಿದೆ
ನಮ್ಮ ಮೇಲೆ ಆಗುತ್ತಿರುವ
ಈ ದೌರ್ಜನ್ಯಕ್ಕೆ ಪರಿಹಾರ
ಕಂಡು ಹಿಡಿಯಲು
ದ್ರೌಪದಿಯ ಅಧ್ಯಕ್ಷತೆಯಲ್ಲಿ
ನಮಸ್ಕಾರ ಬರಲೇ"[7]

'ಸ್ವರ್ಗದಲ್ಲೊಂದು ಸಂದರ್ಶನ' ಎಂಬ ಕವಿತೆಯಲ್ಲಿ ಕವಯತ್ರಿಯು ಪುರಾಣ ಕಾವ್ಯಗಳಲ್ಲಿ ಬರುವ ಆದರ್ಶ ಮಹಿಳೆಯರು ಎಂದು ಬಿಂಬಿತರಾದ ಅಹಲ್ಯ, ಸೀತೆ, ದ್ರೌಪದಿ, ಮಂಡೋದರಿಯರು ಅಂದಿನ ಕಾಲಘಟ್ಟದಲ್ಲಿ ಪುರುಷನಿಂದ ಶೋಷಣೆಗೆ ಒಳಗಾದವರೇ ಆಗಿದ್ದಾರೆ. ಇಂದಿನ ಆಧುನಿಕ ಸಮಾಜವು ಇವರನ್ನು ಮುಂದುಮಾಡಿಕೊಂಡು ಸ್ತ್ರೀಯನ್ನು ಶೋಷಣೆಗೆ ಒಳಪಡಿಸಿರುವುದನ್ನು ಈ ಕಾವ್ಯದ ಮೂಲಕ ಪ್ರತಿಭಟಿಸಿದ್ದಾಳೆ.

"ಮಕ್ಕಳು ತಾಯಿ ನಾವು
ನಿನ್ನ ಮಕ್ಕಳೆ
ಕವಿಗಳ ಹಾಡಿಗೆ
ಅಕ್ಷರಗಳ ಮುತ್ತುಗಳಾದವರು
ಕಲಾವಿದನ ಕುಂಚಕ್ಕೆ ಸುಂದರ
ಬಣ್ಣದ ಪ್ರತಿಮೆಗಳಾದವರು
ಬಟನ್ನಿನ ಕಣ್ಣುಗಳಿಗೆ
ಎಣ್ಣೆ ತೀರಿದ ದೀಪಗಳಾದವರು
ಹೊಕ್ಕಳ ಬಳ್ಳಿಯ ಸಂಬಂಧ ಕಡಿದುಕೊಂಡು
ಅನಾಥ ಬದುಕಿಗೆ ಹೆಸರಾದವರು."[8]

'ಭಾರತಾಂಬೆ ಮಕ್ಕಳು' ಎಂಬ ಕಾವ್ಯದಲ್ಲಿ ಮಹಿಳೆಯನ್ನು ಹೇಗೆ ಕಾಣಲಾಗುತ್ತಿದೆ ಎಂಬುದನ್ನು ಹೇಳುತ್ತಾರೆ. ಮಹಿಳೆಯ ವೈಭವೀಕರಣವು ಬರೀ ಚಿತ್ರಗಳಲ್ಲಿ ಕಂಡು ಬರುತ್ತಿದೆ. ನಿಜವಾಗಿ ಮಹಿಳೆಯನ್ನು ಗೌರವಿಸದೆ ನಿರ್ಜೀವ ವಸ್ತುಗಳ ಮೂಲಕ ತೋರಿಕೆಗೆ ಅದರಲ್ಲೂ ಸ್ತ್ರೀಯನ್ನು ಸೌಂದರ್ಯ ಸಾಧನ ಎಂದು ಗುರುತಿಸಿ ಚಿತ್ರೀಕರಿಸುವ ಪರಂಪರೆ ಭಾರತೀಯ ಸಮಾಜದಲ್ಲಿ ನಡೆದಿರುವುದನ್ನು ಬಯಲಿಗೆಳೆಯುತ್ತಾಳೆ. ಸ್ತ್ರೀಯು ತನ್ನ ಹುಟ್ಟಿದ ಮನೆ ಬಿಟ್ಟು ಗಂಡನ ಮನೆಗೆ ಹೋಗಿ ಅಲ್ಲಿ ಅತ್ತೆ, ಮಾವ, ಗಂಡ ಕೊಡುವ ಚಿತ್ರಹಿಂಸೆಗಳನ್ನೆಲ್ಲಾ ತಡೆದುಕೊಂಡು ಬದುಕನ್ನು ನಡೆಸುವ ನೋವಿನ ಸಂಗತಿಯನ್ನು ಈ ಕಾವ್ಯದ ಮೂಲಕ ತಿಳಿಸಿರುವರು.

"ಮಾಗಿಯ ಚಳಿಯಲ್ಲಿ
ನೆಲೆ ತಪ್ಪಿದ ಮೈಮನಗಳಿಗೆ
ಕಾವು ಕೊಡಲಿಲ್ಲ ಕವನ
ಹಸಿದವಳ ಹಾದರದ
ಹರಿದ ಚಾದರದಲ್ಲಿ ಬೆಚ್ಚಗಾದವನ
ಬಣ್ಣ ಬಯಲುಗೊಳಿಸಲಿಲ್ಲ ಕವನ"[9]

'ಕವನ ಕೊಟ್ಟದ್ದು' ಎಂಬ ಕವಿತೆಯ ಮೂಲಕ ಕವಯತ್ರಿಯು ತಮ್ಮ ಸಾಹಿತ್ಯದ ಮೂಲಕ ಪ್ರತಿಭಟಿಸಿದರು ಯಾವುದೇ ಪ್ರಯೋಜನ ಆಗದಿರುವುದನ್ನು, ವ್ಯವಸ್ಥೆಯು ಬದಲಾಗದಿರುವುದನ್ನು ನೋಡಿ ಈ ರೀತಿಯಾಗಿ ಹೇಳುತ್ತಾಳೆ. ಈ ಕವನದ ಮುಂದುವರೆದು 'ದೇಶಭಕ್ತನ ಪೋಜು ಕೊಟ್ಟು, ಹಗಲು ದರೋಡೆ ಮಾಡುವ ಬೆಳ್ಳಕ್ಕಿಗಳು' ಎಂಬ ಈ ನುಡಿಯು ದೇಶಭಕ್ತರೆಂದೆ ಶೋಷಣೆ ಮಾಡುವವರನ್ನು ಖಂಡಿಸುತ್ತಾಳೆ.

"ಒಲ್ಲದ ನಲ್ಲನ
ಬಲತ್ಕಾರಕ್ಕೊಳಗಾಗಿ
ನೆನಪು ಬೇಡದ ಪಿಂಡ
ಗರ್ಭ ಕಟ್ಟುತ್ತಿರುವಾಗ
ಅಸಹಾಯಕತೆಯಂತೆ
ಗಾಂಧಾರಿಯಂತೆ ಹೊಸಕಿ
ಗರ್ಭಪಾತಕ್ಕೆಳಸುತ್ತವೆ....
ಮಾತೃ ವಾತ್ಸಲ್ಯದ ಸೆಲೆ ಚಿಮ್ಮಿ
ಮರೆಯುತ್ತವೆ ಬಲತ್ಕಾರದ ನೋವ....
ಒಲ್ಲದ ನಲ್ಲನ ನೆನಪ
ಗರ್ಭೀಕರಿಸಿಕೊಂಡು
ಹೆಣ್ತನದ ಹೇಡಿತನಕ್ಕೆ
ಜೀವದುಂಬುತ್ತವೆ."[10]

'ಈ ಹೆಣ್ಣುಗಳೆ ಹೀಗೆ' ಎಂಬ ಕಾವ್ಯದಲ್ಲಿ ಕವಯತ್ರಿಯು ಮದುವೆಯ ಸಂದರ್ಭದಲ್ಲಿ ತಂದೆ–ತಾಯಿಗಳು ಹೇಳಿದವನನ್ನೇ ಹೆಣ್ಣು ಮದುವೆ ಆಗಬೇಕು ಗಂಡನು ಅವಳಿಗೆ ಇಷ್ಟವಿರಲಿ ಅಥವಾ ಬಿಡಲಿ ಅದು ಮುಖ್ಯ ಆಗಿರಲಿಲ್ಲ. ಪುರುಷ ಕೇಂದ್ರಿತ ಈ ಸಮಾಜದಲ್ಲಿ ಹೆಣ್ಣಿಗೆ ಗಂಡನ ಆಯ್ಕೆಯ ಸ್ವಾತಂತ್ರ್ಯವನ್ನು ನೀಡರಲಿಲ್ಲ. ಆದರೆ ಗಂಡು ಮಾತ್ರ ಹೆಣ್ಣನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಪಡೆದಿದ್ದನು. ಇದನ್ನೇ ಕವಯತ್ರಿಯು ಹೆಣ್ಣಾದವಳು ಒಲ್ಲದ ಮನಸ್ಸಿನಿಂದ ಮದುವೆ ಆಗಿ ಹುಟ್ಟುವ ಮಗುವನ್ನು ನೋಡಿ ಮತ್ತೆ ಗಂಡನನ್ನು ಕೂಡಬೇಕಾದ ಸಂದರ್ಭವನ್ನು ಹಾಗೂ ತಾಯಿಯ ಮಮತೆಯೆಂಬುದು ಹುಟ್ಟಿದ ಮಗುವಿನ ಮೇಲೆ ಬರುವಂತದ್ದನ್ನು'ಹೆಣ್ತನ' ಎಂದು ಸಂಬೋಧಿಸುವಂತದ್ದು. ಮಹಿಳೆಗೆ ನೀನು ಹೀಗೆ ಇರಬೇಕು ಎಂದು ಕಟಿಬದ್ದಗೊಳಿಸಲು ಸಮಾಜ ಆಕೆಯ ಮೇಲೆ ಹೆಣ್ತನ ಹೇಡಿತನವನ್ನು ಹಾಕಿದೆ ಎಂದು ಕವಯತ್ರಿಯು ಹೇಳುತ್ತಾಳೆ.

"ನಾ ಅರ್ಧಾಂಗಿಯಾಗಿದ್ದರೂ
ನನ್ನಲ್ಲಿರುವ ಯಾವ ಅಂಗ ನನ್ನದು?
ಅವನ ನಗು ನನ್ನದೆನ್ನಬೇಕು
ನನ್ನ ಗೆಲುವು ಅವನದೆನ್ನಬೇಕು"[11]

'ನನ್ನ ಹೃದಯ' ಎಂಬ ಕವನದಲ್ಲಿ ಹೆಣ್ಣನ್ನು ಪುರುಷನ ಅರ್ಧಾಂಗಿಣಿ ಎಂದು ಹೇಳುತ್ತದೆ. ಆದರೆ ವಿಪರ್ಯಾಸವೆಂದರೆ ಸ್ತ್ರೀಗೆ ಸಮಾನ ಅವಕಾಶ ನೀಡದೆ ಇರುವುದು. ಇಂದಿನ ಆಧುನಿಕ ಯುಗದಲ್ಲಿ 'ಪತಿದೇವ' ಎಂಬ ಮಾತು ಇದೆ ವಿನಃ 'ಪತ್ನಿದೇವಿ' ಎಂಬ ಮಾತು ಕೇಳಿಬರುವುದಿಲ್ಲ. ಆಡಳಿತರೂಢವಾದ ಎಲ್ಲಾ ಹೆಸರುಗಳು ಪುರುಷ ಕೇಂದ್ರಿತ ಇರುವುದನ್ನು ಕಾಣುತ್ತೇವೆ. ಇಲ್ಲಿ ಹೆಣ್ಣು–ಗಂಡು ಎಂಬ ತಾರತಮ್ಯವನ್ನು ಕಾಣುತ್ತೇವೆ. ಮಹಿಳೆಗೂ ಅವಳದೇ ಆದ ಭಾವನಾಲೋಕವೆಂಬುದೊಂದು ಇದೆ. ಆ ಭಾವನೆಯು ಇನ್ನೊಬ್ಬನ ಸ್ವತ್ತನ್ನಾಗಿ ಮಾಡುವ ಈ ಹೆಣ್ಣಿನ ದುರವಸ್ಥೆಯನ್ನು ಕವಯತ್ರಿಯು ಖಂಡಿಸುತ್ತಾಳೆ.

"ಸತಿ ಹೋದ ಸಾವಿತ್ರಿಯರ ಭಸ್ಮ
ನನ್ನ ನೊಸಲ ಮೇಲೆ ಢಾಳಾಗಿ
ಕಾಣುವಾಗಲೆಲ್ಲ ನನ್ನ ರಕ್ತ ಹೆಪ್ಪುಗಟ್ಟುತ್ತದೆ.....
ಬದುಕಿನ ಚುಂಬನದಲ್ಲಿ
ಬರೀ ವಿಷ ತುಂಬಿದೆಯಲ್ಲ
ಸಾವಿನ ಮುತ್ತುಗಳಿಲ್ಲಿ"....[12]

'ಬದುಕು' ಎಂಬ ಕಾವ್ಯದಲ್ಲಿ ಸಮಾಜದ ಅನಿಷ್ಟ ಪದ್ಧತಿಗಳಲ್ಲಿ ಒಂದಾದ 'ಸತಿಪದ್ಧತಿ'ಯು ಹೆಣ್ಣನ್ನು ಪ್ರಾಚೀನ ಕಾಲದಿಂದಲೂ ಬಲಿ ತೆಗೆದುಕೊಳ್ಳುತ್ತಾ ಬಂದಿರುವಂತದ್ದು. ಗಂಡ ಸತ್ತ ಕೂಡಲೇ ಗಂಡನ ಚಿತೆಯಲ್ಲಿ ಜೀವಂತವಾಗಿ ಹೆಣ್ಣನ್ನು ಸುಡುವ ಕೆಟ್ಟ ಪದ್ಧತಿಯನ್ನು ಭಾರತೀಯ ವ್ಯವಸ್ಥೆಯಲ್ಲಿ ನೋಡಿದ್ದೇವೆ. ಸಮಾಜ ಸುಧಾರಕರಾದ ರಾಜಾರಾಮ ಮಹೋನರಾಯರು ಇದರ ಕುರಿತು ಪ್ರತಿಭಟಿಸುತ್ತಾರೆ. ಬ್ರಿಟೀಷ ಅಧಿಕಾರಿಗಳು ಇದರ ನಿಷೇಧ ಕಾಯ್ದೆಯನ್ನು ಜಾರಿಗೆ ತರುತ್ತಾರೆ. ಈ ಕೆಟ್ಟ ಪದ್ಧತಿಯು ಅಂದಿನ ಸಮಾಜದಲ್ಲಿ ಒಂದು

ಮೌಲ್ಯವಾಗಿರುವುದನ್ನು ಕವಯತ್ರಿಯು ವಿರೋಧಿಸುತ್ತಾಳೆ. ಒಂದು ಜೀವಿಯನ್ನು ಬಲಿ ತೆಗೆದುಕೊಳ್ಳುವ ಈ ಕ್ರೂರ ಪದ್ಧತಿಯನ್ನು ಈ ಕಾವ್ಯದ ಮೂಲಕ ಪ್ರತಿಭಟಿಸುತ್ತಾಳೆ.

"ಭೂತದ ಗರ್ಭದಲ್ಲಿನಾ
ಕಣ್ಣತುಂಬ ಕನಸುಗಳ ಹೊತ್ತು
ಹೊಸ ಬದುಕಿನ ಹೊಸಲು ಮೆಟ್ಟುವಾಗ
ನನ್ನಜ್ಜಿ ನನಗೆ ಹೇಳಿದ ಮಾತುಗಳ ನನಗೆ
ಹೇಳಲಾರೆ, ಹೇಳಿ ವಂಚಿಸಲಾರೆ.....
ತ್ಯಾಗದ ಬಲಿಪೀಠವೇರಿ ಯಂತ್ರದಂತೆ
ಬಿಚ್ಚಿಕೊಳ್ಳದೆ ನಿನ್ನ ನೀ ಉಳಿಸಿಕೊಳ್ಳಲು
ಮೈ ತುಂಬ ಮುಳ್ಳುಗಳ ಬೆಳಸಿಕೋ.....
ನನ್ನಿತಿಹಾಸವ ನೀ ಮರೆತರೆ
ಹೊಸ ಇತಿಹಾಸ ನೀ ಬರೆಯುವುದೆಂತು?"[13]

'ಮಗಳಿಗೊಂದು ಕಿವಿಮಾತು' ಎನ್ನುವ, ಈ ಕವನವು ಭವಿಷತ್ತಿನಲ್ಲಿ ಬರುವ ಹೆಣ್ಣುಮಕ್ಕಳಿಗೆ ನೈತಿಕ ಎಚ್ಚರವನ್ನು ತುಂಬುವಂತಾಗಿದ್ದಾಗಿದೆ. ಹಳ್ಳಿಯಲ್ಲಿ ಮದುವೆಯಾಗಿ ಹೋಗುವ ಹೆಣ್ಣುಮಕ್ಕಳಿಗೆ ಅಜ್ಜಿಯಂದಿರು ಹೇಗೆ ಇರಬೇಕು ಎಂದು ಪಾಠ ಕಲಿಸುತ್ತಿದ್ದರು. ಗಂಡ, ಅತ್ತೆ, ಮಾವ ಹೇಳಿದಂತೆ ಕೇಳು ಅವರಿಗೆ ಎದರುವಾದಿಸಬೇಡ ಎಂಬ ಇತ್ಯಾದಿ ಹೇಳಿಕೆಗಳಿಂದ ತುಂಬಿ ಗಂಡನ ಮನೆಗೆ ಬರುವ ಹೆಣ್ಣು ತನ್ನ ಸ್ವತಂತ್ರತೆ ಕಳೆದುಕೊಂಡು ಬಂಧನದಲ್ಲಿಯೇ ಬರುತ್ತಿದ್ದಳು. ಹೆಣ್ಣು ಒಂದು ಯಂತ್ರದಂತೆ ದುಡಿಯದೆ ಸ್ವತಂತ್ರವಾಗಿ ಬದುಕಲು ಮೈ ತುಂಬ ಮುಳ್ಳುಗಳನ್ನು ಬೆಳಸಿಕೋ ಎಂಬಂತಹ ಈ ಹೇಳಿಕೆಯು ತೀವ್ರತರವಾದ ಪ್ರತಿಭಟನೆಯನ್ನು ಒಡ್ಡುವಂತದ್ದಾಗಿದೆ. ಇಂದಿನ ವರ್ತಮಾನದಲ್ಲಿ ಹೆಣ್ಣು ಹೇಗೆ ಬಾಳಬೇಕು ಎಂಬುದನ್ನು ಈ ಕಾವ್ಯದ ಮೂಲಕ ತಿಳಿಸಿದ್ದಾರೆ.

"ಅಯ್ಯೋ ವಂಶೋದ್ಧಾರಕನಲ್ಲೆಂದು
ಗೋಡೆಗೆ ಹಚ್ಚಿದ ಕಿವಿಗಳೆಲ್ಲ
ಜರ್‍ರನೆ ಜರಿದು ಮುದುಡಿಕೊಳ್ಳುತ್ತವೆ....
ಬೆಲ್ಲ ಹಂಚುವ ಕೈಗಳಿಗೆಲ್ಲ ಕುಷ್ಠರೋಗ....
ಹಿರಿತನದ ಗದ್ದುಗೆಯೇರಿದ ನನ್ನಜ್ಜಿ
ಆಜ್ಞಾಪಿಸುತ್ತಾಳೆ
ಸೀತೆ, ಸಾವಿತ್ರಿ, ಅಹಲ್ಯೆಯರ ಹೆಸರಿಡಿರೆಂದು....
ಬದುಕಲು ಹುಟ್ಟಿದ
ನನ್ನ ಕಂದವ್ವನಿಗೆ
ಸೀತೆ, ಸಾವಿತ್ರಿಯರ ಹೆಸರು
ಬೇಡವೇ ಬೇಡವೆಂದು."[14]

'ನಾಮಕರಣ' ಎಂಬ ಕಾವ್ಯದಲ್ಲಿ ಮನೆಯಲ್ಲಿ ಗಂಡುಮಗು ಜನಿಸಿದಾಗಿನ ಸಂಭ್ರಮವು ಹೆಣ್ಣುಮಗು ಜನಿಸಿದಾಗ ಇರುವುದಿಲ್ಲ ಎಂಬುದನ್ನು ಹೇಳುವ ಮೂಲಕ ಪ್ರತಿಭಟನೆಯನ್ನು ವ್ಯಕ್ತಪಡಿಸಿರುವಳು. ಇಂದಿನ ಹಳ್ಳಿಗಳಲ್ಲಿ ನಾವು ನೋಡಿದಾಗ ಗಂಡುಮಗು ಜನಿಸಿದಾಗ ಪೇಡೆ ಹಂಚಿ ಸಂಭ್ರಮ ಪಡುವರು ಅದೇ ಹೆಣ್ಣುಮಗು ಜನಿಸಿದಾಗ ಯಾವುದೇ ಸಂಭ್ರಮದ ಕಾರ್ಯ ಮಾಡದಿರುವುದನ್ನು 'ಬೆಲ್ಲ ಹಂಚುವ ಕೈಗಳಿಗೆಲ್ಲ ಕುಷ್ಠರೋಗ' ಎಂದು ಬೈಯ್ಯುತ್ತಾಳೆ. ಹೆಣ್ಣುಮಗಳಿಗೆ ನಾಮಕರಣ ಮಾಡವ ಸಂದರ್ಭದಲ್ಲಿ ಪ್ರಾಚೀನ ಪರಂಪರೆಯಲ್ಲಿ ಬರುವ ಆದರ್ಶ ಮಹಿಳೆಯರೆಂದು ಕರೆಯಿಸಿಕೊಳ್ಳುವ ಸೀತೆ, ಸಾವಿತ್ರಿಯರ ಹೆಸರನ್ನು ಕರೆದು ಮತ್ತೇ ಹೆಣ್ಣನ್ನು ಅಂಧಕಾರದತ್ತ ಒಯ್ಯುವುದನ್ನು ನಲ್ಲಿಸಲು ಇವರ ಹೆಸರನ್ನು ಇಡುವುದು ಬೇಡ ಎಂದು ಹೇಳುವಳು. ನಮ್ಮ ದುಷ್ಟ ಪರಂಪರೆಗಳೆಲ್ಲವು 'ಅಜ್ಜ ನೆಟ್ಟ ಆಲದ ಮರಕ್ಕೆ ಜೋತು ಬೀಳುವಂತೆ' ಎಂಬ ನಾಣ್ಣುಡಿಗಳಂತಿವೆ. ಯಾವುದನ್ನು ವೈಜ್ಞಾನಿಕವಾಗಿ ತಿಳಿಯದೆ ಒಪ್ಪಿಕೊಳ್ಳಬಾರದು ಎಂಬುದು ಹಾಗೂ ಹೆಣ್ಣುಮಗು–ಗಂಡುಮಗು ಎಂಬ ಭೇದಭಾವ ಮಾಡದೆ ಸಮಾನವಾಗಿ ನೋಡಬೇಕೆಂಬುದನ್ನು ಕಠೋರವಾಗಿಯೇ ನುಡಿದಿದ್ದಾರೆ.

"ಈ ಗಂಡಸರೇ
ಹೀಗೆ
ಹೆಂಡತಿಯ
ಕರೆಗೆ ಕರಗದೆ
ಇದ್ದಾಗ
ಗೌತಮರಾಗುತ್ತಾರೆ
ಕರಗಿದಾಗ
ಇಂದ್ರರಾಗುತ್ತಾರೆ"[15]

'ಗಂಡಸರು' ಎಂಬ ಈ ಮೇಲಿನ ಕವಿತೆಯಲ್ಲಿ ಪುರುಷನ ವ್ಯಕ್ತಿತ್ವವನ್ನು ಅನಾವರಣಗೊಳಿಸಿದ್ದಾರೆ. ಪುರಾಣ–ಪುಣ್ಯಕಥೆಗಳಲ್ಲಿ ಬರುವ ಪುರುಷ ಪ್ರಧಾನ ಪಾತ್ರಗಳನ್ನೇ ತೆಗೆದುಕೊಂಡು ಇಂದಿನ ವ್ಯವಸ್ಥೆಯನ್ನು ಟೀಕಿಸುತ್ತಾರೆ. ಪುರುಷರು ಒಮ್ಮೊಮ್ಮೆ ಸ್ತ್ರೀಯರನ್ನು ಗೌರವದಿಂದ ಕಾಣುತ್ತಾರೆ ಒಮ್ಮೊಮ್ಮೆ ಸ್ತ್ರೀಯನ್ನು ತುಚ್ಛವಾಗಿ ಕಾಣುವುದನ್ನು ಈ ಪಾತ್ರಗಳ ಮೂಲಕ ಪ್ರತಿಭಟಿಸಿದ್ದಾರೆ.

"ಓ ಸ್ವಾತಂತ್ರವೇ
ಇತಿಹಾಸಕ್ಕೆ ಹೊಸ
ಸೀರೆ ಉಡಿಸುತ್ತೇನೆಂದು
ನನ್ನ ಭೂತದ
ತೇಪೆ ಹಚ್ಚಿದ ಸೀರೆ
ಬಿಚ್ಚಿದೆಯಲ್ಲ
ಎಂದು ಕೊಡಿಸುವೆ
ನನಗೆ ಭವಿಷತ್ತಿನ
ಹೊಸ ಸೀರೆಯ"[16]

ಕವಯತ್ರಿಯು 'ಸ್ವಾತಂತ್ರ್ಯ' ಎನ್ನುವ ಕವನದ ಮೂಲಕ ಹೆಣ್ಣಿನ ಸ್ವಾತಂತ್ರ್ಯವನ್ನು ಬಯಸುತ್ತಾರೆ. ಇತಿಹಾಸದಲ್ಲಿ ಕಷ್ಟಗಳನ್ನು ಅನುಭವಿಸಿದ್ದು ಸಾಕು ಇನ್ನಾದರು ಭವಿಷತ್ತಿನಲ್ಲಿ ಹೊಸ ಮನುಷ್ಯರಾಗಿ ಸಮಾನತೆಯ ದಾರಿಯಲ್ಲಿ ನಡೆಯೋನವೆಂದು ಹೇಳಿರುವರು. ಕವಯತ್ರಿಯು ಬರೆದ ಕವನಗಳಾದ 'ಯೇತಿಗಳು', 'ನೋವು', 'ಸೀತವ್ವ' 'ಹೆಣ್ಣು', 'ರಾಣಿಯರು', 'ಪ್ರಸಿದ್ಧ ಪುರುಷರು', ಎಂಬ ಕಾವ್ಯಗಳಲ್ಲಿಯೂ ಸ್ತ್ರೀವಾದದ ಸೂಕ್ಷ್ಮ ಎಳೆಗಳಿರುವುದನ್ನು ಕಾಣುತ್ತೇವೆ.

"ಸಂಸಾರ ಸಾಗರದಲ್ಲಿ ಹೆಣ್ಣೊಂದು ದೋಣಿ
ದಡಸೇರಿಸಲೊಬ್ಬ ಬೇಕಲ್ಲ ಹುಟ್ಟು ಹಿಡಿದವ
ಹುಟ್ಟು ಹಾಕುವವನ ಆಜ್ಞೆಯಂತೆ ಚಲಿಸಬೇಕಲ್ಲವೆ ದೋಣಿ"[17]

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಎಂಬುದು ಒಂದು ವಸ್ತು ಇದ್ದ ಹಾಗೆ ಗಂಡು ಹೇಳಿದಂತೆಯೇ ನಡೆಯಬೇಕೆನ್ನುವುದನ್ನು ವಿರೋಧಿಸುತ್ತಾ ರಾಮಾಯಣ, ಮಹಾಭಾರತ, ಹರಿಶ್ಚಂದ್ರ ಕಾವ್ಯ, ಬುದ್ಧ, ಗಾಂಧಿಯಂತಹ ಪುರುಷ ಶ್ರೇಷ್ಠರು ಮಹಿಳೆಯರ ಶೋಷಣೆಯನ್ನು ಹೇಗೆ ಮಾಡಿದರು ಎಂಬುದನ್ನು ಪ್ರತಿಭಟಿಸಿದ್ದಾಳೆ.

"ಹೆಣ್ಣಾಗಿ ಹುಟ್ಟಿದ್ದಕ್ಕೆ
ಹೆಮ್ಮೆ ಪಡು
ಅವರಿವರು ಮೂಗು ಮುರಿದದ್ದನ್ನು
ಹುಬ್ಬು ಏರಿಸಿದ್ದನ್ನು
ಸುಣ್ಣದ ಬಟ್ಟಿಯಲ್ಲಿ
ನನ್ನ ಅದ್ದಿತೆಗೆದದ್ದನ್ನು
ಮರೆತು ಬಿಡು."[18]

'ಹೆಮ್ಮೆ ಪಡುತ್ತೇನೆ ಹೆಣ್ಣಾಗಿ ಹುಟ್ಟಿದ್ದಕ್ಕೆ' ಎಂಬ ಕವನದಲ್ಲಿ ಸ್ತ್ರೀಯರು ಇಂತಹ ಸಮಾಜದಲ್ಲಿ ಇದ್ದುಕೊಂಡೆ ಹೇಗೆ ಬಲಿಷ್ಠವಾಗಿ ಬೆಳೆಯಬೇಕೆಂಬುದಕ್ಕೆ ಸ್ತ್ರೀಯರಿಗೆ ಕರೆಯನ್ನು ಕೊಡುವರು.

"ಬಚ್ಚ ಬಾಯಿಯ ಅಜ್ಜಿ
ಉಚ್ಚೆ ಹೊಯ್ಯಲು
ನೋಡುತ್ತದೆ ಪಂಚಾಂಗ"[19]

'ಅಜ್ಜಿ ಮತ್ತು ನಾನು' ಎಂಬ ಕವಿತೆಯಲ್ಲಿ ಸಾವಿರಾರು ವರ್ಷಗಳಿಂದ ಹೆಣ್ಣಿನ ಮೇಲೆ ಹೇರಿದ ಪುರೋಹಿತಶಾಹಿವರ್ಗದ ಮೂಢ ನಂಬಿಕೆಗಳನ್ನು ಟೀಕಿಸುತ್ತಾಳೆ. ಅನಕ್ಷರಸ್ಥ ಸಮಾಜದ ಹೆಣ್ಣುಮಕ್ಕಳಿಗೆ ಪಂಚಾಂಗದಲ್ಲಿನ ಒಳ್ಳೆಯ ಮತ್ತು ಕೆಟ್ಟ ದಿನಗಳ ಮೂಲಕ ನಡೆ–ನುಡಿಯನ್ನು ಕಲಿಸುವಂತದ್ದನ್ನು ಕವಯತ್ರಿಯು ಪ್ರತಿಭಟಿಸಿರುವಳು.

"ಕಗ್ಗತ್ತಲ ಬಂಡೆಯ ಕೆಳಗೆ
ಇಳಿದೊಗಲ ತಂದೆ ತಾಯಿಗಳ ಕಂಡು ಹುಡುಗಿ
ಕಣ್ಣ ಬತ್ತಿಯ ಮೈಯ ಪಣತೆಯಲ್ಲಿಟ್ಟು
ಹಚ್ಚಿದಳು ಛಲದ ಬಸ್ತಿಯು ಸಿರ ದೀಪ
ಭರವಸೆಯ ಬೆಳಕಲಿ ಕೇಳಿದಳು ಜಗಕೆ
ಬಾಗಿದ ಬೆನ್ನಿಗೆ ಊರುಗೋಲು ಗಂಡು ಮಾತ್ರ ಎಂದಿರಲ್ಲ
ಹೇಳಿ ಈಗ ಸಾಲುಸಾಲಾಗಿ ಹುಟ್ಟಿದ
ಗಂಡುಗಳೆಲ್ಲ ಊರುಗೋಲಾಗದೆ ಉರಿವಕೊಳ್ಳಿಯಾದವೇಕೆ?"[20]

'ರೊಟ್ಟಿ ಮತ್ತು ಹುಡುಗಿ' ಎಂಬ ಕಾವ್ಯದಲ್ಲಿ ತಂದೆ ತಾಯಿಗಳು ಮುಪ್ಪಾವಸ್ಥೆಯಲ್ಲಿ ತುತ್ತು ಅನ್ನಕಾಣದೆ ಬಿದ್ದಿರುವುದನ್ನು ನೋಡಿದ ಹೆಣ್ಣುಮಗಳು ಹೇಳುವ ಈ ನುಡಿ ಬಲು ಮಾರ್ಮಿಕವಾಗಿ ಮೂಡಿ ಬಂದಿದೆ. ಕುಟುಂಬದಲ್ಲಿ ಗಂಡು ಮಗನಿಗೆ ಎಲ್ಲ ಸ್ಥಾನಮಾನಗಳನ್ನು ನೀಡಲಾಗಿದೆ. ತಂದೆ ತಾಯಿಗಳ ಮುಪ್ಪಿನ ಕಾಲಕ್ಕೆ ಇದೇ ಮುದ್ದಿನಿಂದ ಬೆಳೆಸಿದ ಗಂಡು ಮಗು ಇವರನ್ನು ನೋಡದಿರುವ ದುಸ್ಥಿತಿಯೂ ಇಲ್ಲಿ ವ್ಯಕ್ತವಾಗಿದೆ. ಈ ಜಗತ್ತಿನಲ್ಲಿನ ಇಂತಹ ತಂದೆ ತಾಯಿಗಳ ವಿರುದ್ಧ ಪ್ರತಿಭಟಿಸುವ ನಿಲುವನ್ನು ನಾವು ಕಾಣುತ್ತೇವೆ.

"ಅರಮನೆಯ ಅಮೃತ
ಮತಿಯರೆಲ್ಲ ಅಷ್ಟವಂಕನ
ಎದೆಗೂಡಲಲ್ಲಿ ಕೈಯಾಡಿಸುವಾಗ
ಜಗದ ಜನರ ಮೂಗಿಗೆಲ್ಲ ಬೇವಿನ್ವಾಸನೆ....
ಹೆಣ್ತನದ ಭಾರದಿಂದ ಬಾಗಿದ
ಅಹಲ್ಯೆಯರ ಮೇಲೆ ಇಂದ್ರರ ನೂರು ಕಣ್ಣು.....
ಸೀತೆಯರ ಸಾವಿಗೆ ಸಾಕ್ಷಿಗಳು ಅಗಸನ
ಮಾತಿನ ಮೊಳಕೆಗಳಿವೆ ಲೋಕ ಸಂಹಿತೆಯ ರುಜು"[21]

"ತೀರದ ಬಯಕೆ" ಎಂಬ ಕಾವ್ಯದಲ್ಲಿ ಎಲ್ಲ ಅಪವಾದಗಳನ್ನು ಹೆಣ್ಣಿನ ಮೇಲೆಯೇ ಹೇರಿರುವುದನ್ನು ಕವಯತ್ರಿಯು ಖಂಡಿಸುತ್ತಾಳೆ. ಸ್ತ್ರೀಯನ್ನು ಪುರುಷನು ಭೋಗದ ವಸ್ತುವಿನಂತೆ ಕಾಣುವುದನ್ನು ಹಾಗೂ ಸಮಾಜವು ಸ್ತ್ರೀಯರ ಮೂಲಕವೇ ತಪ್ಪುಗಳನ್ನು ಹುಡುಕುವುದನ್ನು ಕವಯತ್ರಿಯು ಪ್ರತಿಭಟಿಸಿರುವುದನ್ನು ನಾವು ಕಾಣುತ್ತೇವೆ.

'ರೊಟ್ಟಿ ಮತ್ತು ಹುಡುಗಿ' ಎಂಬ ಕವನ ಸಂಕಲನದಲ್ಲಿ ಬರುವ 'ಕೇಳದಿರುವ ಪ್ರಶ್ನೆ', ಈ ನೆಲದಲ್ಲಿ', 'ನನ್ನೊಳಗಿನ ಶಬರಿ', ಕನಸುಗಣ್ಣಿನ ಹುಡುಗಿ', 'ತಂಬೂರಿ', 'ಹೆಣ್ಣು', 'ಬೆಳಕು', 'ಅಪ್ಪ ಮತ್ತು ಜವಾಬ್ದಾರಿ', 'ತಿಳಿಗೊಂಡ ಕ್ಷಣ', 'ಕವಿತೆಯ ಹಂಬಲ', 'ಸುಳ್ಳು', 'ಭೂಗೋಲದ ನೆತ್ತಿಯ ಮೇಲೆ', 'ಸಿವ್ವಿಲ್ ಕೋಡಿನ ಸೂರ್ಯರು', 'ಎಷ್ಟೊಂದು ವೇಷ ಎಷ್ಟೊಂದು ಮೋಸ' ಎಂಬ ಕವನಗಳೆಲ್ಲವು ಸ್ತ್ರೀವಾದದ ನೆಲೆಯಲ್ಲಿ ರಚಿತಗೊಂಡವುಗಳಾಗಿವೆ. 'ಹೆಣ್ಣು' ಎನ್ನುವ ಕವನದಲ್ಲಿ ಹೆಣ್ಣನ್ನು ಹೇಗೆ ಬಳಸಿಕೊಂಡರು ಎಂಬುದನ್ನು ಹೀಗೆ ಹೇಳುತ್ತಾರೆ 'ಹೆಣ್ಣು ಮಡಿಕೆಯೆಂದರು ಬೇಕೆಂದಾಗ ಅಮೃತಪಾನಕ್ಕೆ ಬಳಸಿದರು, ಬೇಡವೆಂದಾಗ ಒಡೆದು ಮಣ್ಣುಪಾಲು ಮಾಡಿದರು' ಎಂಬ ಈ ನುಡಿಯು ಸಮಾಜವು ಹೆಣ್ಣನ್ನು ಕಂಡ ರೀತಿಯನ್ನು ನೋಡಿ ಟೀಕಿಸುತ್ತಾಳೆ.

"ಸೂತಕದಂಗಳದಲ್ಲಿ ಹೊತ್ತಿದ ಹೆಣ್ಣೆಂಬ
ದೀಪ ಹೊಯ್ಯದಾಡುತ್ತಿದೆ ಮುಚ್ಚಿದ ಬಾಗಿಲ
ಸೀಳಿ ಬರುವ ಗಾಳಿಯಲ್ಲಿ ತೊಟ್ಟಿಲ ತೂಗಿದರು
ಸಂಭ್ರಮವಿಲ್ಲದೇ ಸತ್ತ ಅಜ್ಜಿಯ ಪ್ರತಿರೂಪವೆಂದು"[22]

'ಶಿವೆಯೊಲುಮೆಯ ಭಾವದೂರು' ಎಂಬ ಕವಿತೆಯಲ್ಲಿ ಹೆಣ್ಣಿನ ಗೋಳಾಟವನ್ನು ಹೆಣ್ಣಿನ ಶೋಷಣೆಯನ್ನು ಕಾಣುತ್ತೇವೆ. ಕುಟುಂಬವೇ ಹೆಣ್ಣನ್ನು ಹೇಗೆ ಕಾಣುತ್ತದೆ ಎಂಬುದನ್ನು ಹೇಳುವ ಮೂಲಕ ಸ್ತ್ರೀವಾದದ ಅಂಶಗಳನ್ನು ಇಲ್ಲಿ ಭಿತ್ತರಿಸಿರುವರು.

'ಬೆಲ್ಲದಚ್ಚು ಮತ್ತು ಇರುವೆದಂಡು' ಎಂಬ ಕವನ ಸಂಕಲನದಲ್ಲಿನ ಸ್ತ್ರೀವಾದದ ನೆಲೆಯಲ್ಲಿ ಬರುವ ಕವನಗಳನ್ನು ಈ ರೀತಿಯಲ್ಲಿ ಹೆಸರಿಸಬಹುದು 'ಆ ಮನೆ- ಈ ಮನೆ', ನೀರು ನೀರಡಿಸದಂತೆ, 'ನೀವು ಮತ್ತು ನಾನು', 'ಸಂಗಾತಿ', 'ತಾಯಿಯಿಲ್ಲದ ಶಿವತೇಜ', 'ಒಂಟಿ ಹಕ್ಕಿಯ ಹಾಡು', 'ಲೋಕದ ನೀತಿಗೆ ಗಲ್ಲು', 'ಸ್ವಪ್ನ ಸುರುಳಿ', 'ಹೆಣ್ಣು-ಭಾಷೆ', 'ಮೌನ', 'ಹಳೆ ಮನೆ ಹೊಸನಡಿಗೆ', 'ತಾಯಿ ಮಹಾದಾಯಿ', 'ಹೆಗಲುಕೊಡಿ' 'ಅರ್ಥ-ವ್ಯರ್ಥ', 'ಸಂಜೆ ಮಲ್ಲಿಗೆಯ ಜೀವ', 'ಗಲ್ಲದ ಮೇಲಿನ ನಿರಿಗೆ', 'ಮಣ್ಣ ಹೊಟ್ಟೆ', 'ನಿನ್ನ ಸಂಗ', 'ನಾಯಿ ಬೋರ್ಡ್', 'ಕಾಡದಿರು ಚಂದಿರ', 'ಮನೆಯೆಂಬ ಹುತ್ತದೊಳಗೆ', 'ಏಕಾಂತ', ಈ ಎಲ್ಲ ಕವನಗಳು ಸ್ತ್ರೀವಾದದ ನೆಲೆಯಲ್ಲಿ ರಚಿತಗೊಂಡಿರುವುದನ್ನು ನಾವು ಕಾಣುತ್ತೇವೆ.

ಡಾ. ಮಲ್ಲಿಕಾ ಘಂಟಿ ಅವರು ತಮ್ಮ ಬಹುಪಾಲು ಕವಿತೆಗಳನ್ನು ಸ್ತ್ರೀವಾದದ ನೆಲೆಯಲ್ಲಿ ರಚಿಸುತ್ತಾರೆ. ಅವುಗಳಲ್ಲಿ ಸ್ತ್ರೀ-ಪುರುಷರ ಸಮಾನತೆಯನ್ನು ತರುವ ಹಂಬಲ ಎದ್ದು ಕಾಣುತ್ತದೆ. ಶಶಿಕಲಾ ವೀರಯ್ಯಸ್ವಾಮಿ ಅವರು "ಮಲ್ಲಿಕಾ ವಿನಾಕಾರಣ ಪುರುಷ ದ್ವೇಷವಿಲ್ಲದ ಸ್ತ್ರೀವಾದಿ" ಎಂದು ಕರೆದಿರುವರು. ಯಾವ ಕವನದಲ್ಲಿಯೂ ನೇರವಾಗಿ ಪುರುಷನನ್ನು ದ್ವೇಷಿಸದೆ ಬಹಳ ಸೂಕ್ಷ್ಮವಾಗಿ ತಿಳಿಪಡಿಸುವ ರೀತಿಯಲ್ಲಿ ಕವಿತೆಗಳನ್ನು ರಚಿಸಿರುವರು. ಸಮಾಜ ಎಂದಾಗ ಅಲ್ಲಿ ಸ್ತ್ರೀ-ಪುರುಷರ ಸಂಬಂಧ ಆದರ್ಶವಾಗಿದ್ದಾಗ ಮಾತ್ರ ಆದರ್ಶ ಸಮಾಜ ಎಂದು ಗುರುತಿಸಿಕೊಳ್ಳುತ್ತದೆ. ಈ ನಿಟ್ಟಿನಲ್ಲಿ ಕವಯತ್ರಿಯು ಸ್ತ್ರೀವಾದದ ನೆಲೆಗಳ ಮೂಲಕ ಆದರ್ಶ ಸಮಾಜದ ನಿರ್ಮಾಣದ ತುಡಿತವನ್ನು ತಮ್ಮ ಕವಿತೆಯ ಮುಖೇನ ವ್ಯಕ್ತಪಡಿಸಿರುವುದು ಕಂಡುಬರುತ್ತದೆ.

**ಅಡಿಟಿಪ್ಪಣಿಗಳು**


1. 'ರೊಟ್ಟಿ ಮತ್ತು ಹುಡುಗಿ' – ಡಾ.ಮಲ್ಲಿಕಾ ಘಂಟಿ, ಗೌತಮ ಪ್ರಕಾಶನ, ಬಳ್ಳಾರಿ, 1999, ಕವನ ಸಂಕಲನದ 'ನಿಮ್ಮೊಂದಿಗೆ' ಎಂಬ ನುಡಿಯಿಂದ ಎತ್ತಿಕೊಳ್ಳಲಾಗಿದೆ.
2. ತುಳಿಯದಿರಿ ನನ್ನ– ಮಲ್ಲಿಕಾ ಘಂಟಿ, 1986, ಪು.ಸಂ. 6.
3. ಅದೇ ಪುಟ.ಸಂ.9,10.
4. ಅದೇ ಪುಟ ಸಂ. 11,12.
5. ಅದೇ ಪುಟ ಸಂ.22.
6. ಅದೇ ಪುಟ ಸಂ.28
7. ತುಳಿಯದಿರಿ ನನ್ನ– ಮಲ್ಲಿಕಾ ಘಂಟಿ, 1986, ಪು.ಸಂ. 37,38.
8. ಈ ಹೆಣ್ಣುಗಳೆ ಹೀಗೆ–ಮಲ್ಲಿಕಾ ಘಂಟಿ. ಯುವಲೋಕ ಪ್ರಕಾಶನ, ಗುಲಬರ್ಗಾ, 1989, ಪು.ಸಂ.1
9. ಅದೇ ಪುಟ ಸಂ.2
10. ಅದೇ ಪುಟ ಸಂ.6
11. ಅದೇ ಪುಟ ಸಂ.4
12. ಅದೇ ಪುಟ ಸಂ.5
13. ಅದೇ ಪುಟ ಸಂ.14,15
14. ಅದೇ ಪುಟ ಸಂ.12,13
15. ಅದೇ ಪುಟ ಸಂ.31.
16. ಅದೇ ಪುಟ ಸಂ.25
17. ರೊಟ್ಟಿ ಮತ್ತು ಹುಡುಗಿ– ಡಾ.ಮಲ್ಲಿಕಾ ಘಂಟಿ, ಗೌತಮ ಪ್ರಕಾಶನ, ಬಳ್ಳಾರಿ, 1999, ಪು.ಸಂ. 1, 2.
18. ಅದೇ ಪುಟ.ಸಂ. 12.
19. ಅದೇ ಪುಟ ಸಂ. 15.
20. ಅದೇ ಪುಟ ಸಂ. 19.
21. ಅದೇ ಪುಟ ಸಂ. 21
22. ಬೆಲ್ಲದಚ್ಚು ಮತ್ತು ಇರುವೆದಂಡು– ಡಾ.ಮಲ್ಲಿಕಾ ಘಂಟಿ, ವಿಕಾಸ ಚಂದ್ರ ಪ್ರಕಾಶನ, ಬಳ್ಳಾರಿ, 2005, ಪು.ಸಂ. 13.